ಶ್ರೀ ಕೆ. ಮಲ್ಲಪ್ಪ.—ಡಿಸ್ಪಿಕ್ಸ್‌ಳ, ಅವರ ಜುರಿಸಡಿಕ್‌ಷನ್‌ಗೆ ಎಷ್ಟು ಸಂಬಂಧಪಟ್ಟಿದೆಯೋ ಅಷ್ಟು ಪ್ರದೇಶದಲ್ಲಿ ಇರುವ ಸರ್ಕಾರಿಗಳ ಅಜಮಾಯಿಷಿ ಮತ್ತು ಕೋಧನವಾಡಿ ವರದಿ ಕಳುಹಿಸ ಬೇಕು.

2-00 P.M.

Mr. SPEAKER.—Question hour is over.

PAPERS LAID ON THE TABLE.

Sri G. NARAYANA GOWDA (Minister for Agriculture).—Sir, I lay the additional information as promised in reply to starred question No. 806 by Sri B. Channabyre Gowda.

[Placed in Mysore Legislature Library *Vide* No. 8/LA, dated December 1963]

Sri KONDAJJI BASAPPA (Deputy Minister for Co-operation).—Sir, I lay Order No. I WD 38 GIB 62, dated 29th October 1963 (taking over Amani Hosakere Tank, Tumkur Taluk under the Control of Public Works Department); as required under sub-section (2) of Section 30-c of the Mysore Irrigation Act, 1932.

Twentieth Report of the Business Advisory Committee.

Presentation.

Mr. SPEAKER.—I present the twentieth report of the Business Advisory Committee.

Sri A. R. PANCHAGAVI.—I beg to move:

"That this Assembly agrees with the 20th report of the Business Advisory Committee".

Mr. SPEAKER.—The question is:

"That this Assembly agrees with the 20th Report of the Business Advisory Committee".

The motion was adopted.

Introduction of Bills.

Sri M. V. RAMA RAO (Minister for Law).—I beg to introduce the Mysore Court Fees and Suits Valuation (Amendment) Bill, 1963.

Mr. SPEAKER.—The Mysore Court Fees and Suits Valuation (Amendment) Bill, 1963 is introduced.

Sri VEERENDRA PATIL (Minister for Public Works).—Sir, I beg to introduce the Mysore Highways Bill, 1963.

Mr. SPEAKER.—The Mysore Highways Bill, 1963 is introduced.

Sri KONDAJJI BASAPPA (Deputy Minister for Co-operation).—I beg to introduce the Bombay Agricultural Produce Markets (Mysore Amendment) Bill, 1963.

Mr. SPEAKER.—The Bombay Agricultural Produce Markets (Mysore Amendment) Bill, 1963 is introduced.

MYSORE IRRIGATION BILL, 1963.

Motion to consider—(debate contd.)

ಶ್ರೀ ನಂಜೀವನಾಥ ಐಕಳ (ಸುರತ್ಕಲ್).—ಮಾನ್ಯ ಅಧ್ಯಕ್ಷರೆ, 1957ನೆಯ ಇಸವಿಯಲ್ಲಿ ತರಬೇಕಾದ ಬಿಲ್ಲನ್ನು 1963ನೆಯ ಇಸವಿಯಲ್ಲಿ ತಂದಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಇದು ಈಗ ಇರುವ ಪರಿಸ್ಥಿತಿಗನುಗುಣವಾಗಿದೆಯೆ ಎಂದರೆ ಇಂಗ್ಲೀಷಿನಲ್ಲಿರುವ 'ಓಲ್ಡ್ ವೈನ್ ಇನ್ ನ್ಯೂ ಬಾಟಲ್' ಎಂಬ ಗಾದೆಯಂತೆ ಇದೆ, ಹಳೆಯ ವಿಧೇಯಕವನ್ನು 1963ನೆಯ ಇಸವಿಯ ವಿಧೇಯಕ ಎಂದು ಬದಲಾವಣೆ ಮಾಡಿ ತಂದಿದ್ದಾರೆ. ಇದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಯಾವ ಇರಿಗೇಷನ್ ಕೆಲಸಗಳ ಅನುಭವ ಇದರಲ್ಲಿ ಕಾಣುವುದಿಲ್ಲ. ಮುಖ್ಯವಾಗಿ ಅಲ್ಲಿ ಈಗ ಮಾಡಬೇಕಾದ ಸಾಲ್ಟ್‌ವಾಟರ್ ಎಕ್ಸ್‌ಕ್ಲೂಷನ್ ಡ್ಯಾಮ್ಸ್ ಮತ್ತು ಪಂಜೆಡ್ ಡ್ಯಾಮ್ಸ್‌ಗಳ ಉಲ್ಲೇಖ ವಿಧೇಯಕದಲ್ಲಿ ಎಲ್ಲೂ ಕಾಣುವುದಿಲ್ಲ; ಡೆಫೆನಿಷನ್ನಿನಲ್ಲೂ ಕಾಣುವುದಿಲ್ಲ. ಆದುದರಿಂದ ಉಪ್ಪು ನೀರನ್ನು ತಡೆಯುವ ನೀರಾವರಿ ಯೋಜನೆಗಳನ್ನು ಇದರಲ್ಲಿ ಸೇರಿಸುವ ಅಗತ್ಯವಿದೆ. ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಸೇತುವೆ ಕಟ್ಟುವ ಕೆಲಸ ಕೆಲವು ಕಡೆ ನಡೆದಿದೆ. ಅದರ ಉಲ್ಲೇಖ ಕೂಡ ಇದರಲ್ಲಿ ಕಾಣುವುದಿಲ್ಲ. ಆದುದರಿಂದ ಈ ಮಸೂದೆಯ ಸೆಕ್ಷನ್ನಿನಲ್ಲಿ ರೋಡ್ ಕಂ ಬ್ರಿಡ್ಜ್ ಕಂ ಪಂಜೆಡ್ ಡ್ಯಾಂ ಸೇರಿಸುವ ಅಗತ್ಯವಿದೆ. ಅದನ್ನು ಕೆಲವು ತಿದ್ದುಪಡಿಗಳನ್ನು ತರುವಾಗ ನೂಟಿಸುತ್ತೇನೆ. ಇನ್ನೊಂದು ಮುಖ್ಯವಾದ ವಿಷಯ ಇದರಲ್ಲಿ ಕಾಣುವುದಿಲ್ಲ. ಕೆಲವು ಕಡೆ ನದಿಗಳಲ್ಲಿ, ನಾಲೆಗಳಲ್ಲಿ, ಕೆರೆಗಳಲ್ಲಿ ಹೂಳು ತುಂಬಿ ಅನೇಕ ಕಡೆ ಅವು ಉಪಯೋಗಕ್ಕೆ ಬಾರದಹೋಗಿವೆ. ಆ ವಿಷಯದ ಉಲ್ಲೇಖವೂ ಇಲ್ಲ. ಡೀಸಿಲ್ಟಿಂಗ್ ಕೆಲಸವನ್ನು ಈ ವಿಧೇಯಕದಲ್ಲಿ ಅಳವಡಿಸಿದಂತೆ ಕಾಣುವುದಿಲ್ಲ. ಇದನ್ನು ಸೇರಿಸಬೇಕಾದ್ದು ಅಗತ್ಯ.

ನನಗೆ ಮುಂಚೆ ಮಾತನಾಡಿದವರು ಹೇಳಿರುವ ಕೆಲವು ವಿಚಾರಗಳನ್ನು ಮತ್ತೆ ನಾನೂ ಹೇಳಬೇಕಾಗಿದೆ. ನೀರಾವರಿ ಪ್ರದೇಶದಲ್ಲಿ ಹಾಕುತ್ತಿರುವ ಹೆಚ್ಚು ಕರಭಾರಕ್ಕೆ ಅದು ಸಂಬಂಧಪಟ್ಟಿದೆ. ಆ ಪ್ರದೇಶದವರು ಸರ್ಕಾರಕ್ಕೆ ಮೂರು ನಮೂನೆ ತೆರಿಗೆಯನ್ನು ಕೊಡಬೇಕು. ಕೆಲವು ಕಡೆ ಪಂಚಾಯಿತಿ ಸಹ ಕರಭಾರವನ್ನು ಹೊರಿಸಿದೆ. ಅದರ ಮೇಲೆ ಈಗ ಒಂದು ವರ್ಷದಿಂದ ಸೆಂಟ್ ಪರ್ಸೆಂಟ್ ಸರ್‌ಛಾರ್ಜ್ ಇದೆ. ಅದು ಕೆಲವು ವರ್ಷ ಮುಂದುವರೆಯಬಹುದು. ಆದರ ನಂತರ ಹೊಸ ರೀ ಸೆಟ್ಲ್‌ಮೆಂಟ್ ಆದಮೇಲೆ ಮಾನ್ಯ ಕಂದಾಯ ಮಂತ್ರಿಗಳು ಹೆದರಿಸಿರುವ ಹಾಗೆ ಮೂರು ನಾಲ್ಕು ಪಾಲು ತೆರಿಗೆ ಹೆಚ್ಚಬಹುದು. ಈ ಸಂಬಂಧದಲ್ಲಿ ಎರಡು ಮೂರು ಸಲ ಎಚ್ಚರಿಕೆ ಕೊಟ್ಟಿದ್ದಾರೆ. ಈಗಿರುವ 5 ರೂಪಾಯಿ ನೀರು ತೆರಿಗೆ, ಪೆಸ್ಟಿಟನೆನ್ಸ್ ಕಾಸ್ಟ್ ಎಂಬ ಹೆಡ್‌ನಲ್ಲಿ ಹಾಕಿರುವ ತೆರಿಗೆ ಎರಡಾ ಸೇರಿ ಬಹಳ ಹೊರೆಯಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಮೂರು ಬೆಳೆ ತೆಗೆಯುತ್ತಾರೆ. ಅವರಿಗೆ ತುಂಬಾ ಅನ್ಯಾಯವಾಗುತ್ತದೆ. ಹಾಗಾಗದಂತೆ ನೋಡಿಕೊಳ್ಳಬೇಕೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ

ನಮ್ಮ ಜಿಲ್ಲೆ ಒಂದು ಮೂಲೆಯಾಯಿತು. ಅಲ್ಲಿ ನೀರನ್ನು ತೆಗೆದುಕೊಳ್ಳಲು ಸಣ್ಣ ಕಟ್ಟೆ ಹಾಕುವುದು ಮುಂತಾದ ಕೆಲಸಗಳನ್ನು ರೈತರೇ ಸ್ವಂತವಾಗಿ ಮಾಡಿಕೊಳ್ಳುತ್ತಿದ್ದಾರೆ. ಅವುಗಳ ಬಗ್ಗೆ ಬಹಳ ಖರ್ಚುಮಾಡುತ್ತಿದ್ದಾರೆ. ಹಾಗೆ ಖರ್ಚು ಮಾಡಿ ಅನುಕೂಲಪಡಿಸಿಕೊಂಡಿರುವವರಿಗೆ ಸರ್ಕಾರ ಈ ಕಾನೂನು ಪ್ರಕಾರ ಎಕರೆಗೆ 5 ರೂಪಾಯಿಗಳ ತೆರಿಗೆ ಕೊಡಬೇಕೆಂದು ಅವರ ಮೇಲೆ ಹೇರಿದರೆ ಅನ್ಯಾಯವಾಗುತ್ತದೆ. ಒಂದು ಕಡೆ ಖರ್ಚು ಮಾಡಬೇಕು, ಇನ್ನೊಂದು ಕಡೆ ತೆರಿಗೆ ಕೂಡಬೇಕು,